Discussion on the Report of the Mysore Public Service Commission for 1966-67

(Debate Contd.)

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ಪ್ಯಾಮಿ, ಮೊನ್ನೆಯ ದಿವಸ ಈ ಒಂದು ವಿಷಯದ ಪ್ರಾಮುಖ್ಯತೆಯ ಬಗ್ಗೆ ಇಲ್ಲಿ ಚರ್ಚೆಯಾಗತಕ್ಕ ಕಾಲದಲ್ಲಿ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇರಬೇಕೆಂದು ತೀರ್ಮಾನವಾಗಿತ್ತು. ಅದೇ ಚರ್ಚೆಯನ್ನು ಈ ದಿವಸವೂ ಕೂಡ ಮುಂದುವರಿಸಬೇಕೆಂದು ತಾವು ನನಗೆ ಆಜ್ಞೆ ಮಾಡುತ್ತಿದ್ದೀರಿ. ಆದರೆ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಾಜರಿರುವುದಿಲ್ಲ. ಅಧ್ಯಕ್ಷರು ದಯವಿಟ್ಟು ಅವರಿಗೆ ಸಭೆಗೆ ದಯಮಾಡಿಸಬೇಕೆಂದು ಯಾರ ಮೂಲಕವಾಗಲ ಹೇಳಿಕಳುಹಿಸಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಸಭೆಗೆ ಬರಲಿ. ಅನಂತರ ಚರ್ಚೆಯನ್ನು ಮುಂದುವರಿಸೋಣ.

ಧೇರ್ಮನ್ನರು.—ಮುಖ್ಯಮಂತ್ರಿಗಳಿಗೆ ಬರುವಂತೆ ಹೇಳಿಕಳುಹಿಸುತ್ತೇನೆ. ಇಲ್ಲಿ ಪಾರ್ಲಮೆಂಟರಿ ಸಚಿವರಿದ್ದಾರೆ. ತಾವು ಭಾಷಣವನ್ನು ಪ್ರಾರಂಭ ಮಾಡಿ, ಅಷ್ಟರಲ್ಲೇ ಮುಖ್ಯಮಂತ್ರಿಗಳೂ ಬರುತ್ತಾರೆ.

† ಶ್ರೀ ಎಲ್. ಶ್ರೀಕಂಠಯ್ಯ.—ಮಾನ್ಯ ಸಭಾಧ್ಯಕ್ಷರೇ ಇರತಕ್ಕ ಈ ಅತ್ಯಲ್ಪ ಅವಧಿಯಲ್ಲಿ ನಾನು ಪಿ. ಎಸ್. ಸಿ. ವರದಿಯ ಬಗ್ಗೆ ಕೆಲವು ಮಾತುಗಳನ್ನಾಡಬೇಕೆಂದು ಪ್ರಯತ್ನ ಮಾಡುತ್ತೇನೆ. ಹೀಗೆ ನಾನು ಮಾತನಾಡುವಾಗ ಸ್ವಲ್ಪ ಕಟುವಾಗೇ ಮಾತನಾಡಬೇಕಾಗುತ್ತದೆ.

ಧೇರ್ಮನ್ನರು.—ಅದಕ್ಕೇನು ಪರವಾ ಇಲ್ಲ ಮಾತನಾಡಿ.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ನಾವು ಚರ್ಚೆ ಮಾಡಬೇಕಾದುದು 1966-67ನೇ ಸಾಲಿನ ವರದಿಯನ್ನು. ಇದನ್ನು ಚರ್ಚೆ ಮಾಡುತ್ತಿರುವುದು ಯಾವಾಗ? 1970ರಲ್ಲಿ. ಮೂರು ವರ್ಷಗಳು ಕಳೆದ ನಂತರ ಇದನ್ನು ಚರ್ಚೆ ಮಾಡುವುದು ಸೂಕ್ತವಾದುದೇ ಅಲ್ಲವೇ ಎಂಬುದರ ಬಗ್ಗೆ ಸರ್ಕಾರದವರಿಂದ ನನಗೊಂದು ಸ್ಪಷ್ಟವಾದ ಉತ್ತರಬೇಕು. ಇದನ್ನು ಇಷ್ಟು ವಿಳಂಬ ಮಾಡಿ ಸಭೆಯ ಮುಂದೆ ತರುವುದಕ್ಕೆ ಕಾರಣವೇನು? ಇದನ್ನೊಂದು ವೇಳೆ ಇಲ್ಲಿ ಚರ್ಚೆಗೆ ತಾರದೆ ಇದ್ದಿದ್ದರೆ ಆಗುತ್ತಿದ್ದ ಪ್ರಮಾದವಾದರೂ ಏನು? ಅಲ್ಲದೆ ಈಗ ಗತಿಸಿಹೋಗಿರತಕ್ಕ ಮೂರು ವರ್ಷಗಳ ಅವಧಿಯಲ್ಲಿ ಅಲ್ಲಿ ಮತ್ತೇನು ಅಪಘಾತಗಳು ಆಗಿವೆಯೋ ಅದೊಂದೂ ಗೊತ್ತಿಲ್ಲ. ಈ ವರದಿಯ ಕೊನೆಯ ಪುಟದಲ್ಲಿ ಆ ಪಿ. ಎಸ್. ಸಿ. ಅವರು ಯಾವಾಗ ಅವರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದರು ಎಂಬುದಕ್ಕೆ ಒಂದು ಕುರುಹನ್ನು ಕೊಟ್ಟಿದ್ದಾರೆ. ಅವರು ತಮ್ಮ ಈ ವರದಿಯನ್ನು ಸರ್ಕಾರಕ್ಕೆ ಕಳುಹಿಸಿರುವುದು 1968ನೇ ಫೆಬ್ರವರಿಯಲ್ಲಿ. ಇದನ್ನು ಸರ್ಕಾರದವರು ಪ್ರಿಂಟಿಂಗಿಗೆ ಕೊಟ್ಟಿರುವುದು ತಾ 16-9-70ರಲ್ಲಿ. ಅವರು ಹೀಗೆ ಹೇಳಿದ್ದಾರೆ:

The Public Service Commission for the State of Mysore have offered to present the accompanying report on their work for period from 1st April 1966 to March 1967.

ಪಿ. ಎಸ್. ಸಿ. ಅವರು 1968ರಲ್ಲೇ ಕಳುಹಿಸಿದ ವರದಿಯನ್ನು ಸರ್ಕಾರದವರು 1970ರ ವರೆಗೂ ಏಕೆ ತಮ್ಮ ಗರ್ಭದಲ್ಲಟ್ಟುಕೊಂಡಿದ್ದರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಇದನ್ನು ಸರ್ಕಾರದವರು ಪ್ರಿಂಟ್ ಮಾಡಿಸಲು ಪ್ರೆಸ್ಸಿಗೆ ಕಳುಹಿಸಿದ್ದರೆ ಅಲ್ಲಿ ಇದನ್ನು ಮುದ್ರಣ ಮಾಡಲು ಎಷ್ಟು ಕಾಲಾವಾಕಾಶ ಇದಕ್ಕೆ ಬೇಕಾಗುತ್ತಿತ್ತು? ಒಂದೆರಡು ತಿಂಗಳಾದರೆ ಹೆಚ್ಚಾಗಿತ್ತು. ಅಂಥಾದ್ದಕ್ಕೆ ಸರ್ಕಾರದವರು ಒಂದೆರಡು ತಿಂಗಳಲ್ಲಿ ಮುಗಿಸತಕ್ಕ ಕಾರ್ಯಕ್ಕೆ 2ವರ್ಷ 6ತಿಂಗಳ ಕಾಲವನ್ನು ಏಕೆ ತೆಗೆದುಕೊಂಡರು? ಇದಕ್ಕೆ ಅಷ್ಟು ಕಾಲಾವಾಕಾಶ ಬೇಕಾಗಿತ್ತೋ? ಎಲ್ಲಾ ರಿಪೋರ್ಟನ್ನೂ ಇಟ್ಟರೆ ಇಡಬೇಕು, ಬಿಟ್ಟುಬಿಟ್ಟರೆ ಬಿಟ್ಟುಬಿಡಬೇಕು, ರಾಜ್ಯಾಂಗದ 323ನೇ ವಿಧಿ ಪ್ರಕಾರ ಈ ರಿಪೋರ್ಟನ್ನು ವಿಧಾನಮಂಡಲದ ಮುಂದೆ ಇಡುವ ಜವಾಬ್ದಾರಿ ಸರ್ಕಾರದ್ದು ಆಗಿರಬೇಕು, ಹಾಗಿಲ್ಲದೇ ಇದ್ದರೆ ಸರ್ಕಾರದ ಅಧಿಕಾರಿಗಳಿಂದ ಅಲಕ್ಷ್ಯ ಇರಬೇಕು. ಸರ್ಕಾರದಲ್ಲಿ ಒಬ್ಬ ಚೀಫ್ ಸೆಕ್ರೆಟರಿ ಇರಬೇಕೆಂದು ನಾನು ಭಾವಿಸಿದ್ದೇನೆ. ಅವರು ಸಿದ್ಧೆ ಮಾಡುತ್ತಾ ಇದ್ದರೆ? 1966-67ನೇ ಇಸವಿಯ ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟನ್ನು 1970ನೇ ಇಸವಿಯಲ್ಲಿ ಈ ಸಭೆಯ ಮುಂದೆ ಇಡುತ್ತಾ ಇದ್ದೀರಿ. ರಾಜ್ಯಾಂಗದ ಕಾನೂನು ವಿಧಿ ಪ್ರಕಾರವಾಗಿ shall ಎಂಬ ಪದ ಇದ್ದರೂ ತಾವು ಈ ರಿಪೋರ್ಟನ್ನು ಸಕಾಲ ದಲ್ಲಿ

ಪ್ರಯತ್ನ ಮಾಡುತ್ತಾ ಇಲ್ಲ. ಚೀಫ್ ಸೆಕ್ರೆಟರಿಯವರು ಬರೀ ಸಂಬಳ ತೆಗೆದುಕೊಳ್ಳುತ್ತಿದ್ದಾರೆಯೇ? I hold the Chief Secretary primarily responsible—either he should serve the State or go out of the State. These two reports are sufficient to hold him responsible for the delay. ಏತಕ್ಕೆಂದರೆ ಇದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆದ್ಯ ಕರ್ತವ್ಯ. 4, 5, 6 ವರ್ಷವಾದ ಮೇಲೆ ಈ ರಿಪೋರ್ಟ್‌ನ್ನು ಚರ್ಚೆ ಮಾಡಿ ಎಂದರೆ ನಾವು ಏನು ಚರ್ಚೆ ಮಾಡುವುದು, ನಾವು ಏನು ಸರ್ಕಾರಕ್ಕೆ ಸಲಹೆ ಕೊಡುವುದು? ಅದೆಲ್ಲಾ ನಡ್ತುಹೋಗಿರುವುದಕ್ಕೆ ನಾವು ಸಲಹೆ ಕೊಟ್ಟ ಹಾಗಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಲಕ್ಷ್ಯ, ಅಗೌರವ ಮಾಡಿದ್ದಾರೆ ಎಂದು ಭಾವಿಸಿದ್ದೇನೆ. ಇದಕ್ಕೆ ಅವರು ಉತ್ತರವನ್ನು ಕೊಡುತ್ತಾರೆಂದು ನಿರೀಕ್ಷಿಸುತ್ತೇನೆ. ಈ ಒಂದು ಅಸಹನೀಯವಾದ ಕೆಲಸವನ್ನು ಮುಂದೆ ಮಾಡಬೇಡಿ. ರಾಜ್ಯಾಂಗದ ಕಾನೂನು ವಿಧಿ ಪ್ರಕಾರ ಪ್ರತಿವರ್ಷವೂ ರಿಪೋರ್ಟ್‌ನ್ನು ಕೊಡಬೇಕೆಂದು ಇದೆ. 3 ತಿಂಗಳು, 4 ತಿಂಗಳು, 6 ತಿಂಗಳು ನಿಧಾನವಾಗಲಿ, 6 ತಿಂಗಳೊಳಗೆ ರಿಪೋರ್ಟ್‌ನ್ನು ಕೊಟ್ಟರೆ ಈ ರಾಜ್ಯದಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ ಹೇಗೆ ಕೆಲಸ ಮಾಡುತ್ತಾ ಇದೆ ಎಂದು ಗೊತ್ತಾಗುತ್ತದೆ. ನಾವು ಅವರಿಗೆ ರಕ್ಷಣೆ ಕೊಡಬೇಕು. ಸರ್ಕಾರದ ನ್ಯೆಜ ಚಿತ್ರ ಸಿವಿಲ್ ಸರ್ವಿಸ್‌ನಲ್ಲಿ ಕಾಣುತ್ತದೆ. ಇನ್ನಾದರೂ ಸರ್ಕಾರ ಎಚ್ಚೆತ್ತು ಈ ವರ್ಷದ ರಿಪೋರ್ಟನ್ನಾದರೂ ಈ ಸಭೆಯ ಮುಂದೆ ಅದಷ್ಟು ಜಾಗ್ರತೆ ಹಾಜರು ಪಡಿಸಲಿ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಚೀಫ್ ಸೆಕ್ರೆಟರಿಯವರಲ್ಲಿ ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲವೇ ಚೀಫ್ ಸೆಕ್ರೆಟರಿಯವರು ರಾಜೀನಾಮೆ ಕೊಟ್ಟು ಹೊರಟು ಹೋಗಲಿ. ಏತಕ್ಕೆ ಇಷ್ಟು ಖತ್ತಾಯಪೂರ್ವಕವಾಗಿ ಹೇಳಬೇಕಾಗಿ ಬಂದಿದೆ ಎಂದರೆ ಪಬ್ಲಿಕ್ ಸರ್ವಿಸ್ ಕಮೀಷನ್ನಿಗೂ ಸರ್ಕಾರಕ್ಕೂ ಇರುವ ಸಂಬಂಧ ಮತ್ತು ರಾಜ್ಯದ ಆಡಳಿತ ಹೇಗೆ ನಡೆಯುತ್ತದೆ ಎನ್ನುವುದು ಈ ರಿಪೋರ್ಟ್ ಮೂಲಕ ಗೊತ್ತಾಗುತ್ತದೆ. ಈವೊತ್ತಿನ ದಿವಸ ಪ್ಲಾನಿಂಗ್ ಯೋಜನೆಯಲ್ಲಿ ಸಿವಿಲ್ ಸರ್ವಿಸಸ್ ಎಲ್ಲಾ ವಿಧವಲ್ಲೂ ಹಿಂದೆ ಬೀಳುತ್ತಾ ಇದೆ. ಒಬ್ಬ ಸಾಮಾನ್ಯವಾದ ಪ್ರಜೆ ಈ ರಿಪೋರ್ಟ್‌ನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ರಿಪೋರ್ಟ್ ಮೂಲಕ ರಾಜ್ಯದ ಆಡಳಿತ ಹೇಗೆ ನಡೆಯುತ್ತಾ ಇದೆ, ಹೇಗೆ ಸಾಧನೆಯಾಗುತ್ತಾ ಇದೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರದ ಲೋಪದೋಷಗಳನ್ನು ತಿಳಿಯಲು ಕನ್ನಡಿಯಂತಿರುವ ಇಂತಹ ವರದಿಗಳನ್ನು ನಭೆಯ ಮುಂದಿಡಲು ತಡಮಾಡಬಾರದು. 1966—67, 67—68, 68—69, 69—70ನೇ ಇನಿಯಿಲ್ಲಿ ಇವರ ಬಾಂಧವ್ಯಗಳು ಕಡಿಮೆಯಾಗಿ ಹೋಗುತ್ತಾ ಇವೆ. ನಾವು ಅದನ್ನು ಕಾಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ರಾಜ್ಯಾಂಗದ ಪ್ರಕಾರ ಈ ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟ್‌ನ್ನು ಅಮೂಲಾಗ್ರವಾಗಿ ಚರ್ಚೆ ಮಾಡಿದರೆ ಏನು ಎಂದು ಗೊತ್ತಾಗುತ್ತದೆ.

ಒಂದನೆಯದಾಗಿ There is demoralization in Civil Services. ರಾಜ್ಯದಲ್ಲಿ ಎಲ್ಲ ಅಧಿಕಾರಿಗಳಲ್ಲೂ ನಿಸ್ಸಹಾಯಕತೆ, ಅಲಸ್ಯ ಮನೋಭಾವ, ಅದಕ್ಷತೆ, ಬೇಜವಾಬ್ದಾರಿ, ಎಳೆಂಟು ನೀತಿ ಎಲ್ಲಾ ಕಡೆಯಲ್ಲೂ ತಾಂಡವಾಡುತ್ತಿದೆ. ಸಾರ್ವಜನಿಕ ಜೀವನದಲ್ಲಿ ಪ್ರತಿಯೊಬ್ಬರ ಬಾಯಿನಲ್ಲೂ ಈ ಮಾತನ್ನು ಕೇಳುತ್ತಿದ್ದೇವೆ. ಪರಿಸ್ಥಿತಿ ಹೇಗಿದೆ ಎಂದರೆ ಅಧಿಕಾರಿಯನ್ನು ಕೇಳಿದರೆ ಅವರು ಕೊಡುವ ಸಂಬಳಕ್ಕಿಂತ ನಾವು ಹೆಚ್ಚು ದುಡಿಯುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಸಾರ್ವಜನಿಕರು ದುಡ್ಡು ಚೆಲ್ಲಿದ ಹೊರತು ಯಾವ ಕೆಲಸವೂ ನಡೆಯುವುದಿಲ್ಲ. ಸಾರ್ವಜನಿಕರ ಕೆಲಸ ಆಗಬೇಕಾದರೆ ಕರಪ್ಷನ್ ಆದ ಹೊರತು ಒಂದು ಪೇಪರ್ ಮುಂದಕ್ಕೆ ಹೋಗುವುದಿಲ್ಲ. ಈ ನಿರ್ಲಕ್ಷತೆ ಏತಕ್ಕೆ ಬಂದಿದೆಯೋ ನನಗಂತೂ ಗೊತ್ತಿಲ್ಲ. ಕಾರಣ ಈ ರಿಪೋರ್ಟ್‌ನಲ್ಲಿ ಅನೇಕ ಸತ್ಯಾಂಶಗಳು ಕನ್ನಡಿ ಇದ್ದಹಾಗೆ ಕಾಣುತ್ತಾ ಇದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರೂ ಕೂಡ ಬಹಳ ನೊಂದು ಟೀಕೆಗಳನ್ನು ಪಟ್ಟಿ ಮಾಡಿ ಹೊರಡಿಸಿದ್ದಾರೆ. ಈ ಒಂದು ಕಾರಣದಿಂದ ಈ ವರದಿ ಬರುವುದು ತಡವಾಗಿದೆ. ನಾವು ಸುಖವಾಗಿ ಇರಬೇಕು ಎನ್ನುವ ಅಭಿಪ್ರಾಯ ಸರ್ಕಾರಿ ಅಧಿಕಾರಿಗಳಲ್ಲಿ ಬೆಳೆಯುತ್ತಾ ಬಂದಿದೆ. ಆದುದರಿಂದ ಸರ್ಕಾರ ಇದರ ಮೇಲೆ ನೇರವಾದ ಜವಾಬ್ದಾರಿಯನ್ನು ವಹಿಸಬೇಕು ಇಲ್ಲವೇ ಇದಕ್ಕೆ ಸರ್ಕಾರದವರೇ ಕಾರಣರು ಎಂದು ಹೇಳಬೇಕಾಗುತ್ತದೆ.

ಇನ್ನು ಜನತೆಯ ಪರಿಸ್ಥಿತಿಯನ್ನು ನೆನೆಸಿಕೊಂಡರೆ ನಮ್ಮ ಭಾರತದೇಶದಲ್ಲಿ ಪಬ್ಲಿಕ್ ಇಂಡಸ್ಟ್ರೀಸ್ ಹೇಗೆ ನಡೆಯುತ್ತದೆಯೋ ಅದೇ ರೀತಿ ಸಿವಿಲ್ ಸರ್ವಿಸಸ್ ನಡೆಯುತ್ತಾ ಬಂದಿದೆ ಎಂದು ಹೇಳಬಹುದು. ಯಾವ ಪಬ್ಲಿಕ್ ಇಂಡಸ್ಟ್ರೀಸ್ ತೆಗೆದುಕೊಂಡರೂ ಲಾಸ್, ಲಾಸ್ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಇದಕ್ಕೆ ಕಾರಣ ಅಧಿಕಾರಿಗಳ ಇನ್‌ಎಫಿಷಿಯೆನ್ಸಿ, ಕರಪ್ಷನ್,

(ಶ್ರೀ ಎಲ್. ಶ್ರೀಕಂಠಯ್ಯ)

ವಿಳಂಬವಿನೀತಿ. ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೆಚ್ಚು ಹೆಚ್ಚಾಗಿ ಹುದ್ದೆಗಳನ್ನು ನಿರ್ಮಿಸಿದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಇದಕ್ಕೆ ಪ್ರತ್ಯೇಕವಾದ ಔದ್ಯೋಗೀಕರಣದ ನೀತಿ ಬೇಕು. ಅವರ ಮೂಲಕ ಬಗೆಹರಿಸಬೇಕು. ಅದಲ್ಲದೆ 4–5 ಜನಗಳಿಗೆ ಕೆಲ ಹುದ್ದೆಗಳನ್ನು ನಿರ್ಮಿಸಿ ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆ ಎನ್ನುವುದು ಸಾಧ್ಯವಿಲ್ಲ ಎಂದು ನಾನು ಸ್ಪಷ್ಟ ಪಡಿಸುತ್ತೇನೆ. ಅದರ ಬಗ್ಗೆ ನಾನು ಬಹಳ ವಿಶದೀಕರಿಸುವುದಕ್ಕೆ ಹೋಗುವುದಿಲ್ಲ. ಈ ಪ್ರಜಾ ಪ್ರಭುತ್ವದಲ್ಲಿ ಅದರಲ್ಲೂ ಕೂಡ ಈ ಒಂದು ಪಿಕ್ಸೆಡ್ ಎಕಾನಮಿಯಲ್ಲಿ ಸಿವಿಲ್ ಸರ್ವಿಸಸ್ ಇದರ ಬಗ್ಗೆ ಅನೇಕರು ಡಿಬೇಟ್ ಮಾಡುತ್ತಾ ಇರುವಾಗ ತಮ್ಮ ಮನೋಭಾವನೆಯನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸಬೇಕಾಗಿದೆ. ಜನರಿಗೆ ಅನುಕೂಲ ಮಾಡಬೇಕು ಎಂದು ಪ್ಲಾನನ್ನು ಮಾಡುತ್ತಾ ಇರುವಾಗ ನೀವು 19ನೇ ಶತಮಾನದ ಸಿವಿಲ್ ಸರ್ವಿಸನ್ನು ಇಟ್ಟುಕೊಂಡು ಕೆಲಸ ಮಾಡಿಕೊಂಡು ಹೋಗುತ್ತೇವೆ ಎಂದರೆ, ಅವರಿಂದ ಆ ಕೆಲಸ ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ, ಮತ್ತು ಅನೇಕ ತಜ್ಞರೂ ಕೂಡ ಅದೇ ರೀತಿ ಅಭಿಪ್ರಾಯ ಪಡುತ್ತಾರೆ. ಒಂದು ವಿಷಯ ಮಾತ್ರ ನಾನು ಸ್ಪಷ್ಟಪಡಿಸುತ್ತೇನೆ. ಅವರಿಗೆ ಸಂಬಳ ಹೆಚ್ಚು ಬೇಕು, ಕೊಡೋಣ. ಆದರೆ ಈ ಒಂದು ಸಂಬಳ ಹೆಚ್ಚು ಮಾಡುವುದರಿಂದ ಅವರಲ್ಲಿರುವ inefficiency, irresponsibility, corruption ಹೋಗುತ್ತದೆಯೇ ಎಂದು ಕೇಳುತ್ತೇನೆ.

ಇನ್ನು ಐ.ಎ.ಎಸ್. ಅಧಿಕಾರಿಗಳಿಗೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಅನೇಕ ಹುದ್ದೆಗಳನ್ನು ಕೊಟ್ಟಿದ್ದೀರಿ. ಅವರು ಆ ಹುದ್ದೆಗಳಲ್ಲಿ ತಜ್ಞರಲ್ಲದೇ ಇದ್ದರೂ ಕೂಡ ಅವರನ್ನು ಅಲ್ಲಿಗೆ ನೇಮಿಸಿರುವುದರಿಂದ ಈ ಕೈಗಾರಿಕೆಗಳಲ್ಲಿ ನಷ್ಟವಾಗಿದೆ.

12-00 Noon

ಐ. ಎ. ಎಸ್. ಅಧಿಕಾರಿಗಳು ಅಟಾಮಿಕ್ ಎನರ್ಜಿ ಕಮಿಷನ್‌ನಿಂದ ಹಿಡಿದು ಮುಖ್ಯ ಮಂತ್ರಿಯಾಗಿ ಎಲ್ಲಾ ಕಾರ್ಯವನ್ನೂ ನಿರ್ವಹಿಸುತ್ತಿದ್ದಾರೆ. ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಗಳು ಇದರಿಂದಾಗಿ ಹಾಳಾಗಿಹೋಗುತ್ತಾ ಇವೆ. ಐ. ಎ. ಎಸ್. ಅಧಿಕಾರಿಗಳು ಇದಕ್ಕೆ ಮುಖ್ಯ ಕಾರಣ ಎಂದು ಚಾರ್ಜು ಮಾಡುತ್ತೇನೆ. ಅವರಿಗೆ ವಿಷಯ ಗೊತ್ತಿಲ್ಲ, ನಾಲೆಜ್ ಇಲ್ಲ, ಪರಿಣತಿಯೂ ಇಲ್ಲ. ಕಾನೂನು ದೃಷ್ಟಿಯಿಂದ ಕೇಂದ್ರಸರಕಾರದ ನೀತಿ ಏನು ಎಂದೂ ಗೊತ್ತಿಲ್ಲ. ಈ ಒಂದು ಕಾರಣದಿಂದ ಈವೊತ್ತು ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಸಾರ್ವಜನಿಕ ಸಂಪರ್ಕ ಕಳೆದುಕೊಂಡು ಸಂಪೂರ್ಣವಾಗಿ ನಾಶವಾಗುತ್ತಾ ಇದೆ. ಸಾಕ್ಷೀಭೂತವಾಗಿ ಹೇಳಬೇಕಾದರೆ ಎರಡು ರಿಪೋರ್ಟನ್ನು 7 ವರ್ಷಗಳ ಮೇಲೆ ಈ ಐ. ಎ. ಎಸ್. ಅಧಿಕಾರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಇವರ ಎಫಿಷಿಯೆನ್ಸಿ ಏನು ಎಂದು ಇವರ ರಿಪೋರ್ಟಿನಲ್ಲಿ ಕಾಣುತ್ತದೆ. ಈ ವಿಷಯವಾಗಿ ಹೆಚ್ಚು ಪ್ರಸ್ತಾಪ ಮಾಡಲು ಟೈಂ ಇಲ್ಲ. ಇನ್ನು ಪಿ.ಎಸ್. ಸಿ. ರಿಪೋರ್ಟಿಗೆ ಬರುತ್ತೇನೆ. ಈ ರಿಪೋರ್ಟನ್ನು ಆದ್ಯಂತವಾಗಿ ಓದಿದರೆ ಮೂರು ಅಂಶಗಳು ಸ್ಪಷ್ಟವಾಗಿ ಕಾಣುತ್ತಾ ಇವೆ. ಪ್ರತಿಯೊಂದು ಪುಟದಲ್ಲಿ ಓದಿದರೂ ಕೂಡ ಹಂತ ಹಂತದಲ್ಲಿಯೂ ಸರಕಾರದವರು ಈ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೊಟ್ಟಿರತಕ್ಕಂಥ ಪ್ರತಿಯೊಂದು ಸಲಹೆಯನ್ನೂ ನಿರ್ಲಕ್ಷಿಸಿ ಅದನ್ನು ಕಾಲಿನಿಂದ ತುಳಿದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಏನು ಕಾರಣ ಎಂದು ಮೆಮೊರಾಡಂನಲ್ಲಿ ಕೊಟ್ಟಿದ್ದಾರೆ ಕೆಲವು ಡಿಸಿಪ್ಲಿನರಿ ಆಕ್ಷನ್ ಬಗ್ಗೆ ಈ ಕಾರಣಗಳಿಂದ ಒಪ್ಪಲಿಲ್ಲ ಎಂದು ಹೇಳಿದ್ದಾರೆ. ಇನ್ನು ಕೆಲವು ಭಾಗಗಳಿಗೆ ಯಾವ ಎಕ್ಸ್‌ಪ್ಲನೇಷನ್ ಕೊಟ್ಟಿಲ್ಲ. ಹೆಸರಿಗೆ ಮಾತ್ರ ಅಮ್ಮಾವ್ರಗಂಡ ಅಂದ ಹಾಗೆ ಏನೋ ಒಂದು ಪಬ್ಲಿಕ್ ಸರ್ವಿಸ್ ಕಮೀಷನ್ ಇದೆ. ಏನೋ ಒಂದು ಅಭಿಪ್ರಾಯ ಕೇಳಬೇಕು, ಏನೂ ಒಂದು ಶಾಸ್ತ್ರ ಕೇಳಬೇಕು ಎಂದು ಕೇಳಿದ್ದಾರೆಯೇ ಏನಹ ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಅಲ್ಲಿ ಇರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರು ಎಲ್ಲಾ ದಡ್ಡರು. ದಡ್ಡರಿಗೆ ಏನು ಅಭಿಪ್ರಾಯ ಕೊಡುವುದಕ್ಕೆ ಬರುವುದಿಲ್ಲ ಆದುದರಿಂದ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ ನಮಗೆ ಇಷ್ಟ ಬಂದಹಾಗೆ ರಾಜ್ಯಭಾರ ಮಾಡೋಣ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಎರಡನೆಯ ಅಂಶ ಈ ಒಂದು ರಿಪೋರ್ಟನ್ನು ಓದಿದರೆ, ಸರಕಾರದಲ್ಲಿ ನಿಮ್ಮ ಕೆಲಸ ಆಗಬೇಕಾದರೆ ನೀವು ಎಂ. ಎಲ್. ಎ ಅಥವಾ ಯಾರಾದರೂ ಮುಖ್ಯಸ್ಥರನ್ನು ಹಿಡಿದುಕೊಂಡು ಸರಕಾರಕ್ಕೆ ಎಲ್ಲಿ ಎಣ್ಣೆ ಹಾಕಬೇಕೋ ಅಲ್ಲಿ ಹಾಕಿ ಎಲ್ಲಿ ಕೀಲು ತಿರುಗಿಸಬೇಕೋ ಅಲ್ಲಿ ತಿರುಗಿಸಿದರೆ ನಿಮ್ಮ ಕೆಲಸವಾಗುತ್ತದೆ ಎಂದು ಗೊತ್ತಾಗುತ್ತದೆ. ನಿಮ್ಮ ಕೆಲಸವಾಗಬೇಕಾದರೆ ಸರಕಾರಕ್ಕೆ ಕೊಡಬೇಕಾದದ್ದು ಕೊಟ್ಟರೆ ನಿಮ್ಮ ಕೆಲಸ ಆಗುತ್ತದೆಂದರೆ ಯಾಕೆ

ಪಿ. ಎಸ್. ಸಿ. ಅಂತ ಇಟ್ಟುಕೊಳ್ಳಬೇಕೆಂದು ಕೇಳುತ್ತೇನೆ. ಮೂರನೇ ಅಂಶ ಅಬ್‌ಸೆನ್ಸ್ ಆಫ್ ರೂಲ್ ಆಫ್ ಲಾ ಪ್ರತಿಯೊಂದು ಪುಟದಲ್ಲಿಯೂ ಕಾಣುತಾ ಇದೆ. ನಲಹೆಗಳು ಏನಾದರೂ ಬಾದರೆ ಅದು ಅಪ್ರಯೋಜಕ ಎಂದು ಹೇಳುವುದು. ಅವರು ನಲಹೆಗಳನ್ನು ಕೊಟ್ಟಹಾಗೆ, ಇವರು ನಲಹೆಗಳನ್ನು ಒಪ್ಪದೆ ಇರುವಹಾಗೆ ಎರಡ್ನಾ ನಾಟಕ ನಡೆದಹಾಗೆ ನಡೆಯುತಾ ಇದೆ. There is total break down of the Rule of law. ಯಾವ ಡಿಪಾರ್ಟ್‌ಮೆಂಟಿನಲ್ಲಿ ನೋಡಲ ರೂಲ್ಸ್ ಇಲ್ಲ. ರೂಲ್ಸ್ ಇದ್ದರೂ ಅದಕ್ಕೆ ಒಂದು ಎಕ್ಸ್‌ಪ್ಷನ್. ಮೊದಲನಿಂದ ಕೊನೆಯವರೆಗೂ ಈ ರಿಪೋರ್ಟನ್ನು ಓದಿದ್ದೇನೆ ಅದರಲ್ಲಿ ಕೆಲವು ಭಾಗಗಳನ್ನು ಮಾತ್ರ ತಮ್ಮ ಮುಂದೆ ಇಡುತ್ತೇನೆ. ಉದಾಹರಣೆಗೆ 28ನೇ ಪುಟದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಏನು ನೊಂದುಕೊಂಡು ಬರೆದಿದ್ದಾರೆ ಎಂದು ಗೊತ್ತಾಗುತ್ತದೆ.

"Under the provisions of article 320 (3) of the Constitution read with the Mysore Public Service Commission (Consultation) Regulations, 1958, the Commission are required to advise the Government with respect to the suitability and fitness of the Government servants in Class III service and above for purpose of promotion from one Class of service to another. Several administrative orders have been issued by the Government from time to time specifically instructing Heads of Departments to prepare, in advance, annually eligibility lists of persons who are fit for promotion from one class or grade or post to another, in consultation with the Commission where such consultation is necessary. It is a matter of great regret to note that these statutory provisions and administrative instructions notwithstanding there has been an increasing tendency on the part of the departments of the Government to promote persons without prior consultations with the Commission and then seek the advice of the Commission with respect to such promotions on an *ex-post-facto* basis—often after the lapse of several months and even years. This practice of *ex-post-facto* consultation in the matter of promotions from one class of service to another has, of late, begun to assume alarming proportions in the case of certain larger departments, such as Public Works and Electricity, Co-operation, Agriculture, Education, Commercial Taxes and Revenue, not to mention the General Administration itself. In these departments, it is not uncommon to observe that the eligibility lists for purposes of promotion which have been prepared in consultation with the Commission have long since been exhausted. However, the respective Heads of Departments have remained inexplicably dilatory in the matter of moving the Commission for the preparation of fresh eligibility lists in accordance with the orders of the Government. In the meanwhile, promotions are made from one class of service to another—sometimes even in contravention of the statutory recruitment rules—to confer their *post facto* seal of approval with respect to the same. Thus unwholesome state of affairs has been brought to the attention of the Government on more than one occasion to no particular avail.

(ಶ್ರೀ ಎಲ್. ಶ್ರೀಕಂಠಯ್ಯ)

In view of these lapses, the advice of the Commission in respect of promotions is very often reduced to a formal exercise bereft of any practical implications for the good of the administration.

ಇನ್ನು ಅದಕ್ಕಿಂತಲೂ ಮುಖ್ಯವಾದದ್ದು ಬಹಳ ಸ್ಪಷ್ಟವಾಗಿ ಪಬ್ಲಿಕ್ ಸರ್ವಿಸ್ ಕಮಿಷನಿನವರು ಅವರ ರಿಪೋರ್ಟಿನಲ್ಲಿ ಹೇಳಿದ್ದಾರೆ. ಅದು ಪುಟ 32 ರಲ್ಲಿ ಹೀಗಿದೆ :

" Two clear instances in which such appointments have had to be countenanced by the Commission solely on account of unconscionable delay in the issue of the relevant statutory recruitment rules are cited below by way of illustration :—"

DELAY IN ISSUE OF STATUTORY RULES

" The Commission have repeatedly drawn attention in their previous Annual Reports with respect to the extraordinary delays entertained by the Government in the issue of the Cadre and Recruitment Rules pertaining to several departments. In certain cases, dratt Cadre and Recruitment Rules have been framed by the Government on which the Commission has long since tendered their advice. However, despite the lapse of several months and even years, the concerned rules have yet to be promulgated by the Governor under Article 309 of the Constitution. A brief list of the important departments of the Government and local bodies whose respective Cadre and Recruitment Rules have yet to be issued is given below :—

1. Bangalore Dairy ;
2. Bangalore City Corporation ;
3. Bangalore City Improvement Trust Board ;
4. Bangalore Water and Sewerage Board ;
5. Dharwar Municipal Corporation ;
6. Directorate of N. C. C.
7. Drugs Control ;
8. Marketing ;
9. Mysore City Municipality ;
10. Mysore Stores Purchase Department ;
11. Vijnan Mandirs.

The Commission are not aware of the precise difficulties, if any, which have prevented a speedy promulgation of the cited Cadre and Recruitment Rules. In general, however, they would like to deprecate all such delays because of the deleterious effect they are likely to have on the administration. In the absence of such statutory rules, all appointments in the concerned cadres are likely to be made on an *ad hoc* basis and without reference to the recognised principles of recruitment and the minimum qualifications necessary for filling up the

concerned posts. In time, the persons so appointed acquire vested interest and resist any attempt to review these appointments after the issue of the relevant recruitment rules. In this manner, the long term interests of the department and hence of the administration are affected."

36 ಮತ್ತು 37ನೆಯ ಪುಟಗಳನ್ನು ಓದಿದರೆ ದಾರುಣ ಚಿತ್ರ ಕಂಡುಬರುತ್ತದೆ. ಇನ್ನೂ ಕೆಲವು ಭಾಗಗಳನ್ನು ಓದುತ್ತೇನೆ. 33ನೆ ಪುಟದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಕನ್ಸಲ್ಟ್ ಮಾಡಿದಿರುವ ವಿಚಾರವಿದೆ. ಅದು ಈ ರೀತಿಯಾಗಿ ಇದೆ :

" As a result of certain disciplinary proceedings, a Class II officer in the Education Department had been punished in April 1963, with the stoppage of his next increment which was due on 1st January 1964, for a period of one year. However, before the said punishment had even begun to operate, the Government promoted the Officer to a Class I post and sought the advice of the Commission. In declining their concurrence in this behalf, the Commission pointed out that in the circumstances of the case the officer in question could either be promoted after the expiry of the period of punishment or after the order of punishment had been cancelled by the competent authority in accordance with the rules, but not earlier, and that any departure from this procedure would not only render the entire departmental proceedings infructuous but would also have a demoralising effect on the administration.

In reply, the Commission were furnished with a copy of an order passed by the Governor, in exercise of his powers of review under Rule 26 of the Mysore State Civil Service (Classification, Control and Appeal) Rules, setting aside the punishment withholding the next increment of the promoted officer on the grounds that it was not possible on the basis of the said order of punishment to withhold the increment earned by him in the Class I post, and instead awarding him a mere censure.

This order has been passed without consulting the Commission although such consultation was mandatory under Regulation 5 (1) (a) of the Mysore Public Service Commission (Consultation) Regulations 1958 (*vide* Appendix VI).

(*b*) Rules and Regulations :

In notification issued in June 1966, the Mysore State Civil Service (General Recruitment) Rules 1957, were amended so as to provide for the relaxation of the maximum prescribed for recruitment to the posts in the State Civil Services in favour of candidates released from the National Cadet Corps after service as whole time Cadet Instructor to the extent of the number of years of service rendered by them as such. The Government had not consulted the Commission prior to the issue of this

(ಶ್ರೀ ಎಲ್. ಶ್ರೀಕಂಠಯ್ಯ)

amendment although constitutionally required to do so (*vide* Sl. No. 6 of the Appendix XIV).

ಪ್ರತಿಯೊಂದು ಪುಟದಲ್ಲೂ ಕೂಡ ಸರಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್‌ನವರೇನು ಸಲಹ ಕೊಟ್ಟಿದ್ದಾರೆ ಅನ್ನು ಕಾಲಿನಿಂದ ತುಳಿದಿದ್ದಾರೆ. ಅದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ನೇರವಾಗಿ ದವಲತ್ತು ಮಾಡಲು ಸರಕಾರದವರು ಹೊರಟಿದ್ದಾರೆ, ಇದರಿಂದ ಬಹಳವಾಗಿ ಹಣ ಪೋಲಾಗುತ್ತಿದೆ, ವರ್ಷಕ್ಕೆ 5 ಲಕ್ಷ ರೂಪಾಯಿಗಳು ಪಿ. ಎಸ್. ಸಿ.ಗೆ ಖರ್ಚಾಗುತ್ತಿದೆ. ಇದನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ, ಬಾವಿ ಮುಂತಾದವುಗಳಿಗೆ ಉಪಯೋಗಿಸಬಹುದಾಗಿತ್ತು. ಕೇವಲ ಉತ್ಸವ ಮೂರ್ತಿಯಾಗಿ ಪಿ. ಎಸ್. ಸಿ. ಯನ್ನು ಪಾರ್ಕ್ ಹೌಸಿನಲ್ಲಿ ಕೂಡಿಸಿ ಲಕ್ಷಾಂತರ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿ ಅದರ ಸಿಬ್ಬಂದಿಗೆ ಬೇಕಾದಷ್ಟು ವೆಚ್ಚಮಾಡಿ ಅದು ಹೇಳುವುದಕ್ಕೆ ಬೆಲೆ ಕೊಡದೆ ಅದರ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ತಳ್ಳಿಹಾಕುವುದಾದರೆ ಪಿ. ಎಸ್. ಸಿ. ಏಕಿರಬೇಕು? ಅದಕ್ಕಾಗಿ ಹಣವನ್ನೇಕೆ ಖರ್ಚುಮಾಡಬೇಕು?

[MR. SPEAKER in the Chair]

ಈ ಕಮಿಟೀಷನನ್ನು ಅಲ್ಲ ರಾಜಕೀಯವಾಗಿ ಬೇಕಾದವರನ್ನು ತುಂಬಲು ಮಾಡಿದಂತಿದೆ, ಇದರಿಂದ ಬೇಕಾದಷ್ಟು ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಪ್ರತಿಯೊಂದು ಪುಟದಲ್ಲೂ ಕಾಣುವಂತೆ ಸರಕಾರಕ್ಕೂ ಕಮಿಷನ್ನಿಗೂ ಮಧುರ ಬಾಂಧವ್ಯವಿಲ್ಲ, ಕೇವಲ ತೋರಿಕೆಗಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ನೇಮಿಸಿದ್ದಾರೆ, ಅದರ ಅಡಳಿತದಲ್ಲಿ ಸರಕಾರ ಹಸ್ತಕ್ಷೇಪ ಮಾಡುತ್ತಿದೆ. ಸರಕಾರ ತನ್ನ ಹೊಣೆಯನ್ನು ತಪ್ಪಿಸಿಕೊಳ್ಳಲು ಈ ಕಮಿಷನ್ನನ್ನು ನೇಮಿಸಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ.

ಪುಟ 23 ರಲ್ಲಿ ಹೇಳಿರುವುದು ಬಹಳ ನ್ಯಾಯಸ್ಯವಾಗಿದೆ. ಅದಕ್ಕಿಂತಲೂ ದಾರುಣವಾದ ಚಿತ್ರ ಬೇರೊಂದಿಲ್ಲ. ಅಲ್ಲಿ ನಮೂದಾಗಿರುವ ವ್ಯಕ್ತಿಯ ಬಗ್ಗೆ ಯಾರಿಗೋ ಏನೋ ಸಂಬಂಧವಿರಬೇಕು ಅತ ಯಾರೋ ಗೊತ್ತಿಲ್ಲ, ಯಾರಿಗೋ ಲಕ್ಷ್ಮಿ ಕಟಾಕ್ಷವಾಗಿದೆ, ಅವರು ಯಾರೋ ಮಂತ್ರಿಗಳನ್ನು ಹಿಡಿದಿದ್ದಾರೆ. ಅಲ್ಲಿ ಹೀಗೆ ಹೇಳಿದೆ:

(4): "The services of an Assistant Engineer, Public Works Department, Mysore, had been placed at the disposal of the Government of India for being appointed as Deputy Director, T. E. Directorate, Central Water and Power Commission (Water wing), New Delhi, in grade of Rs. 700–1,200, for a period of 3 years, on a deputation basis. With a view to raising his status in the State Public Works Department, during the period of his deputation, the Government proposed as a special case, to promote him to the post of Executive Engineer (Class I) without affecting the seniority of others and sought the concurrence of the Commission.

Apart from the fact that the officer proposed for promotion was far too junior in the cadre, the Commission felt that it was a novel proposal to promote an officer on deputation solely with a view to raising his status in the parent department. Further, such promotion was not covered by any rule in force. The Commission accordingly advised the Government against this proposal.

Contrary to this advice, the Government promoted the officer to officiate as Executive Engineer with retrospective effect from 20th June 1963 without prejudice to the claims of his seniors (*vide* Appendix VI)."

Business of the house

MR. SPEAKER.—Mr. Srikantiah is making a fine speech. I am sorry to interrupt. There are about a dozen hon. Members who want to participate in this debate. I do not think it would be right to stifle this debate. Even if we sit one hour late, it will not be possible for sufficient number of hon. Members to take part in the debate. I have therefore a suggestion to make and I place it before the Hon. House for its approval. The discussion on this report may be resumed in the next session, probably other reports also might be presented by that time. I have requested the Chief Minister to present reports for subsequent years for 1967, 1968 and 1969 if possible. But this debate will not depend upon the production of those reports.

SRI H. SIDDAVEERAPPA.—This suggestion has not been considered by the Business Advisory Committee. This is a thing which you cannot do on your own. This will have to go before the Business Advisory Committee and their opinion taken as to how it should be taken up.

MR. SPEAKER.—I am putting this proposal before the House. for the consideration of Members because there are one or two matters in which Sri Siddaveerappa is also interested regarding the admissions to medical colleges etc., My suggestion is, we may take up those things and we may continue the discussion on the Public Service Commission Report at the next sitting.

SRI H. SIDDAVEERAPPA.—May I respectfully submit that this discussion may also continue ? We may close at 1-00 P.M. and meet again at 3 P.M. After this discussion is closed, we may require perhaps an hour. I therefore suggest that we may close by about 6 or 7 P.M. Now what has happened is, we were utterly frustrated ; on Saturday when we dispersed it was distinctly understood this morning's session was only for considering the report of the Public Service Commission. This is a very important report. Sri L. Sreekantiah was pin pointing several of the points which is done in the interests of the State. To ask him to stop at this stage and to take it up again, what does it show ? I am really unable to understand how things could be managed like this ?

Therefore, we may have some rest between 1 to 3 P.M. And then this subject may be debated and let it be discussed and after this discussion, the medical college admission may take us half-an-hour or three-fourths of an hour. Otherwise to say we will stop at this and then to take up again, I for one am unable to see the logic of this.